**<u>3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.</u>**

**<u>ಎಸ್.ಸಿ. ಸಂಖ್ಯೆಃ 74/2019</u>**

ದಿನಾಂಕಃ 20.04.2022

ಚಾಸಾ - 3 ಪ್ರಾಸಾ - 4

| | | |
|---|---|---|
| ಹೆಸರು | ಃ | ಸುಧಾಕರ್ |
| ತಂದೆಯ/ಗಂಡನ ಹೆಸರು | ಃ | ರುದ್ರೇಶ್ |
| ವಯಸ್ಸು | ಃ | 12 ವರ್ಷ |
| ಉದ್ಯೋಗ | ಃ | ವಿದ್ಯಾರ್ಥಿ - 7 ನೇ ತರಗತಿ |
| ವಾಸಸ್ಥಳ | ಃ | ಉದೇವಾರ |

**<u>(ಪ್ರಸ್ತುತ ಸಾಕ್ಷಿ ಅಪ್ರಾಪ್ತ ಬಾಲಕನಾಗಿದ್ದು, ಸಾಕ್ಷಿ ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡು ಉತ್ತರ ನೀಡಬಲ್ಲನೇ ಇಲ್ಲವೇ ಎಂಬುವುದಾಗಿ ಖಚಿತಪಡಿಸಿಕೊಳ್ಳಲಾಗಿದೆ. ನ್ಯಾಯಾಲಯ ಕೇಳಿದ ಪ್ರಶ್ನೆಗಳಿಗೆ ಸಾಕ್ಷಿ ತಾನು ವ್ಯಾಸಾಂಗ ಮಾಡುತ್ತಿದ್ದು, ಹಾಸನ ಜಿಲ್ಲಾ ಸಕಲೇಶಪುರ ತಾಲ್ಲೂಕಿನ ಅರೇಹಳ್ಳಿ ಸಮೀಪ ಇರುವ ಉದೇವಾರದಲ್ಲಿ ವಾಸವಾಗಿದ್ದು, ಸಕಲೇಶಪುರದಲ್ಲಿ ಕಾಫಿ ಹೆಚ್ಚಾಗಿ ಬೆಳೆಯುತ್ತಾರೆಂದು ಮತ್ತು ಸದರಿ ಸಕಲೇಶಪುರವನ್ನು ಮಲೆನಾಡೆಂದು ಪರಿಗಣಿಸಲಾಗಿದೆ ಎಂದು ನುಡಿದಿದ್ದು, ಸದರಿ ಉತ್ತರಗಳು ಸಮರ್ಪಕವಾಗಿದ್ದು, ಸಾಕ್ಷಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ)</u>**

**<u>ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ</u>**

ನನ್ನ ತಂದೆ ನಿಧನ ಹೊಂದಿರುತ್ತಾರೆ. ನನ್ನ ತಂದೆ ಅರಣ್ಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ನನ್ನ ತಂದೆ ತೀರಿಕೊಂಡ ಹಿನ್ನೆಲೆಯಲ್ಲಿ ನನ್ನ ತಾಯಿ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಾಯಿ ಚಿಕ್ಕಮಗಳೂರಿನ ಅರಣ್ಯ ಇಲಾಖೆಯ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

2. ನನ್ನ ತಾಯಿ ಈ ರೀತಿಯಾಗಿ ಕೆಲಸ ನಿರ್ವಹಿಸಬೇಕಾದರೆ ನಾವುಗಳು ಚಿಕ್ಕಮಗಳೂರಿನ ರಾಮೇಶ್ವರ ನಗರ ಬಡಾವಣೆಯಲ್ಲಿ

ನೆಲೆಸಿದ್ದೆವು. ನಾನು, ನನ್ನ ತಾಯಿ ಮತ್ತು ನನ್ನ ತಂಗಿ ವಾಸವಾಗಿದ್ದೆವು. ನನ್ನ ತಾಯಿ ದಿನಂಪ್ರತಿ ಸಂಜೆ 4 ರ ಸಮಯಕ್ಕೆ ಕೆಲಸದಿಂದ ಮರಳುತ್ತಿದ್ದರು.

3. ನಾವು 3 ಜನ ಚಿಕ್ಕಮಗಳೂರಿನ ರಾಮೇಶ್ವರ ನಗರ ಬಡಾವಣೆಯಲ್ಲಿ ನೆಲೆಸಿದ್ದಾಗ ನಮ್ಮ ಮನೆಗೆ ನಮ್ಮ ಅಜ್ಜಿ-ತಾತ ಆಗಾಗ್ಗೆ ಬಂದು ಹೋಗುತ್ತಿದ್ದರು. ನನ್ನ ತಾಯಿ ನನ್ನ ಅಜ್ಜಿ-ತಾತನ ಜೊತೆ ಮಾತನಾಡುತ್ತಿದ್ದರು.

4. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿರುವುದಿಲ್ಲ. ಪ್ರಶ್ನಿಸಿದಂತೆ ಆರೋಪಿ ನಮ್ಮ ಮನೆಗೆ ಬಂದು ಹೋಗುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ.

5. ನನ್ನ ತಾಯಿ ಈಗ ನೆಲೆಸಿಲ್ಲ. ಆಕೆ ಕೊಲೆಯಾಗಲ್ಪಟ್ಟಿದ್ದಾರೆ. ನನ್ನ ತಾಯಿ ದಿನಾಂಕ 16.02.2019 ರಲ್ಲಿ ನಿಧನ ಹೊಂದಿರುತ್ತಾರೆ. ನನ್ನ ತಾಯಿ ನಿಧನದ ನಿಕಟಪೂರ್ವದಲ್ಲಿ ಆಕೆ ಯಾರ ಜೊತೆ ಎಲ್ಲಿಗೆ ಹೋಗಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯ ನಿಧನದ ಕಾರಣದ ಬಗ್ಗೆ ಚಿಕ್ಕಮಗಳೂರು ಪೊಲೀಸರು ತಿಳಿಸಿರುತ್ತಾರೆ. ಆದರೆ ಪೊಲೀಸರು ನನ್ನ ತಾಯಿ ತನ್ನ ನಿಧನದ ನಿಕಟಪೂರ್ವದಲ್ಲಿ ಯಾರೊಂದಿಗೆ, ಎಲ್ಲಿಗೆ ಹೋಗಿರುತ್ತಾರೆಂದು ತಿಳಿಸಿರುವುದಿಲ್ಲ.

6. ಪೊಲೀಸರು ನನ್ನ ತಾಯಿಯ ಶವದ ಫೋಟೋ ಮತ್ತು ನನ್ನ ತಾಯಿ ಧರಿಸುತ್ತಿದ್ದ ಒಡವೆಗಳನ್ನು ತೋರಿಸಿರುತ್ತಾರೆ. ನನ್ನ ತಾಯಿ ಯಾರಿಂದ, ಹೇಗೆ, ಯಾವ ಕಾರಣಕ್ಕೆ ಕೊಲೆಯಾಗಿದ್ದಾರೆ ಎಂಬುವುದಾಗಿ ನಾನು ಪೊಲೀಸರಿಂದ ತಿಳಿದುಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ, ಪರಿಶೀಲಿಸಿದೆ. ಈ ಸಾಕ್ಷಿಯ ಸಾಕ್ಷ್ಯವು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷ್ಯಕ್ಕೆ ವಿರುದ್ಧವಾಗಿ ಕಂಡುಬಂದಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸುವುದು ನ್ಯಾಯಸಮ್ಮತವಾಗಿದೆ. ಈ ಕಾರಣಕ್ಕಾಗಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)

**ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ**

7. ನನ್ನ ತಾಯಿ ಕೊಲೆಯಾದಾಗ ನಾನು ರಾಮೇಶ್ವರ ನಗರ ಬಡಾವಣೆಯ ಮನೆಯಲ್ಲಿ ನೆಲೆಸಿದ್ದೆನು. ನನ್ನ ತಾಯಿ ಮನೆ ಬಿಟ್ಟು ಹೋದಾಗ ನಾನು ಮತ್ತು ನನ್ನ ತಂಗಿ ಮನೆಯಲ್ಲಿ ಇದ್ದೆವು. ನನ್ನ ತಾಯಿ ತಾವು ಬೆಂಗಳೂರಿಗೆ ಹೋಗಿ ಬರುವುದಾಗಿ ತಿಳಿಸಿದರು. ಆ ಕಾಲಕ್ಕೆ ನನ್ನ ತಾಯಿ ನಮ್ಮಗಳನ್ನು ಕುರಿತು ಹುಷಾರಾಗಿ ಇರಬೇಕೆಂದು ಹೇಳಿ ಲೇಸ್ ತಿನಿಸು ಪ್ಯಾಕೇಟ್‌ಗಳನ್ನು ನೀಡಿರುತ್ತಾರೆ.

**ಪ್ರಶ್ನೆ 1ಃ** ನಿಮ್ಮ ತಾಯಿ ಬೆಂಗಳೂರಿಗೆ ಹೋಗುವ ಪೂರ್ವದಲ್ಲಿ ಅಂಕಲ್ ಜೊತೆಯಲ್ಲಿ ಹೋಗಿ ಬರುತ್ತೇನೆ ಎಂದು ತಿಳಿಸಿದರು.

**ಉತ್ತರಃ** ತಿಳಿಸಿದರು ಹೌದು ಆದರೆ ಯಾವ ಅಂಕಲ್ ಜೊತೆಯಲ್ಲಿ ಹೋಗುತ್ತಾರೆ ಎಂದು ತಿಳಿಸಿರಲಿಲ್ಲ.

**ಪ್ರಶ್ನೆ 2ಃ** ನಿಮ್ಮ ತಾಯಿ ಹೇಗೆ ಮತ್ತು ಯಾವ ರೀತಿಯಲ್ಲಿ ಬೆಂಗಳೂರಿಗೆ ಹೋದರು?

**ಉತ್ತರಃ** ಕಾರೊಂದರಲ್ಲಿ ನಮ್ಮ ತಾಯಿ ಹೋಗಿರುತ್ತಾರೆ.

**ಪ್ರಶ್ನೆ 3ಃ** ನೀನೇನಾದರೂ ಸದರಿ ಕಾರನ್ನು ನೋಡಿದೆಯಾ? ನೀನೇನಾದರೂ ನಿಮ್ಮ ತಾಯಿ ಯಾವ ಕಾರಿನಲ್ಲಿ ಹೋಗುತ್ತಾರೆ ಎಂಬ ಬಗ್ಗೆ ವಿಚಾರಿಸಿದೆಯಾ?

**ಉತ್ತರಃ** ಯಾವ ಕಾರಿನಲ್ಲಿ ಹೋದರೋ ನನಗೆ ಗೊತ್ತಿಲ್ಲ ಮತ್ತು ಅವರು ಯಾವ ಮತ್ತು ಯಾರ ಕಾರಿನಲ್ಲಿ ಹೋಗುತ್ತಾರೆ ಎಂಬುವುದಾಗಿ ನಾನು ಅವರನ್ನು ಪ್ರಶ್ನಿಸಿರುವುದಿಲ್ಲ.

**ಪ್ರಶ್ನೆ 4ಃ** ನಿಮ್ಮ ತಾಯಿ ತೀರಿಕೊಂಡ ಸಂಗತಿ ಯಾರುನಿಮಗೆ ಹೇಳಿದರು?

**ಉತ್ತರಃ** ನಮ್ಮ ತಾಯಿ ಫೋನ್‌ನ್ನು ಮನೆಯಲ್ಲಿಯೇ ಬಿಟ್ಟು ಹೋಗಿದ್ದರು. ಫೋನಿನ ಮುಖೇನ ನಮ್ಮ ಅಜ್ಜಿಯನ್ನು ಸಂಪರ್ಕಿಸಿದೆ. ಅವರು ಬಂದು ನಂತರ ಬೀಗ ಹೊಡೆದಿರುತ್ತಾರೆ.

**ಪ್ರಶ್ನೆ 5ಃ** ನಿಮ್ಮ ಅಜ್ಜಿ ನಿಮ್ಮ ತಾಯಿಯನ್ನು ಯಾರು ಹೇಗೆ ಕೊಲೆ ಮಾಡಿರುತ್ತಾರೆ ಎಂಬುವುದಾಗಿ ನಿಮಗೆ ತಿಳಿಸಿರುತ್ತಾರಾ?

**ಉತ್ತರಃ** ನನ್ನ ಅಜ್ಜಿ ಈ ಬಗ್ಗೆ ಏನನ್ನೂ ಹೇಳಿರುವುದಿಲ್ಲ.

**ಪ್ರಶ್ನೆ 6ಃ** ನೀನಾದರೂ ನಿಮ್ಮ ಅಜ್ಜಿಯನ್ನಾಗಲೀ, ನಿಮ್ಮ ನೆಂಟರನ್ನಾಗಲೀ, ನಿಮ್ಮ ತಾಯಿ ಯಾರಿಂದ ಹೇಗೆ ಕೊಲೆಯಾಗಲ್ಪಟ್ಟಿದ್ದಾರೆ ಎಂಬ ಬಗ್ಗೆ ವಿಚಾರಿಸಿರುವಿರಾ?

**ಉತ್ತರಃ** ವಿಚಾರಿಸಿರುತ್ತೇನೆ. ಯಾರೋ ಅಂಕಲ್ ಕೊಲೆ ಮಾಡಿರುವುದಾಗಿ ತಿಳಿಸಿರುತ್ತಾರೆ.

**ಪ್ರಶ್ನೆ 7ಃ** ನಿಮ್ಮ ಮನೆಗೆ ನಿಮ್ಮ ಅಜ್ಜಿ ತಾತನನ್ನು ಹೊರತು ಪಡಿಸಿ ಬೇರೆ ಇತರರು ಯಾರು ಬರುತ್ತಿದ್ದರು?

**ಉತ್ತರಃ** ಹಬ್ಬ ಹರಿದಿನಗಳಲ್ಲಿ ಮತ್ತು ಸಮಾರಂಭಗಳಲ್ಲಿ ನಮ್ಮ ನೆಂಟರಿಷ್ಟರು ಬರುತ್ತಿದ್ದರು.

**ಪ್ರಶ್ನೆ 8ಃ** ನ್ಯಾಯಾಲಯದ ಮುಂದಿರುವ ಮತ್ತು ಈಗ ನಿಮಗೆ ತೋರಿಸಿದ ವ್ಯಕ್ತಿ ನಿಮ್ಮ ಚಿಕ್ಕಮಗಳೂರಿನ ಮನೆಗೆ ಆಗಾಗ್ಗೆ ಬಂದು ಹೋಗುತ್ತಿದ್ದರು?

**ಉತ್ತರಃ** ಇಲ್ಲ.

**ಪ್ರಶ್ನೆ 9ಃ** ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯದ ಮುಂದಿರುವ ಆರೋಪಿ ವ್ಯಕ್ತಿ ನಿಮ್ಮನ್ನು ಸಂಪರ್ಕಿಸಿ ನಿಮ್ಮ ತಾಯಿಯ ನಿಧನದ ಹಿನ್ನೆಲೆಯಲ್ಲಿ ಸಾಂತ್ವಾನ ಹೇಳಿರುತ್ತಾರೆ?

**ಉತ್ತರಃ** ಸರಿಯಲ್ಲ.

**ಪ್ರಶ್ನೆ 10ಃ** ನಿಮ್ಮ ಅಜ್ಜಿ ನ್ಯಾಯಾಲಯದ ಮುಂದಿರುವ ಅಂಕಲ್ ವಿರುದ್ಧವಾಗಿ ಸಾಕ್ಷಿ ನುಡಿಯಬಾರದೆಂದು ನಿಮಗೆ ತಿಳಿ ಹೇಳಿರುತ್ತಾರೆ ಎಂದರೆ?

**ಉತ್ತರಃ** ಇಲ್ಲ.

**ಪ್ರಶ್ನೆ 11:** ನ್ಯಾಯಾಲಯದ ಮುಂದಿರುವ ಆರೋಪಿ ಅಂಕಲ್ ನಿಮ್ಮ ಮನೆಗೆ ಬರುತ್ತಿದ್ದರು, ನಿಮ್ಮ ತಾಯಿ ಅವರನ್ನು ನಿಮಗೆ ಪರಿಚಯಿಸಿದ್ದರು?

**ಉತ್ತರ:** ಇಲ್ಲ.

**ಪ್ರಶ್ನೆ 12:** ಸೂಚಿಸಿದಂತೆ ನ್ಯಾಯಾಲಯದ ಮುಂದಿರುವ ಆರೋಪಿ ನಿಮ್ಮ ಮನೆಗೆ ಬಂದು ಸಾಕಷ್ಟು ಸಮಯ ನಿಮ್ಮ ತಾಯಿಯೊಂದಿಗೆ ಮಾತನಾಡುತ್ತಿದ್ದರು ಎಂದರೆ?

**ಉತ್ತರ:** ಇಲ್ಲ.

**ಪ್ರಶ್ನೆ 13:** ನೀವುಗಳು ಸಾಕಷ್ಟು ಬಾರಿ ನಿಮ್ಮ ತಾಯಿ ಮತ್ತು ಅಂಕಲ್ ಜೊತೆಯಲ್ಲಿ ಹೊರಗಡೆ ಹೋಗಿರುತ್ತೀರಿ ಎಂದರೆ?

**ಉತ್ತರ:** ಇಲ್ಲ.

**ಪ್ರಶ್ನೆ 14:** ದಿನಾಂಕ 16.02.2019 ರಂದು ನಿಮ್ಮ ತಾಯಿ ಕೆಲಸಕ್ಕೆ ಹೋಗಿರಲಿಲ್ಲ?

**ಉತ್ತರ:** ದಿನಾಂಕ 15 ಮತ್ತು 16 ನೇ ಫೆಬ್ರವರಿ 2019 ರಂದು ನನ್ನ ತಾಯಿ ಕೆಲಸಕ್ಕೆ ಹೋಗಿರುವುದಿಲ್ಲ.

**ಪ್ರಶ್ನೆ 15:** ನಿಮ್ಮ ತಾಯಿ ಮನೆಯಲ್ಲಿದ್ದಾಗ ಮೊಬೈಲ್‌ನ ಸ್ಪೀಕರ್‌ನ್ನು ಆನ್ ಮಾಡಿ ಮಾತನಾಡುತ್ತಿದ್ದರು?

**ಉತ್ತರ:** ತಪ್ಪು.

**ಪ್ರಶ್ನೆ 16**ಃ ಸೂಚಿಸಿದಂತೆ ಸ್ಪೀಕರ್ ಆನ್ ಮಾಡಿ ಮಾತನಾಡುತ್ತಿದ್ದಾಗ ಮತ್ತೊಂದು ಬದಿಯಿಂದ ಶ್ರೀಕಾಂತ್ ಎಂಬ ಹೆಸರಿನ ಅಂಕಲ್ ಮಾತನಾಡುತ್ತಿದ್ದುದ್ದನ್ನು ನೀವು ಕೇಳಿಸಿ ಕೊಂಡಿರುವಿರಿ?

**ಉತ್ತರ**ಃ ತಪ್ಪು.

**ಪ್ರಶ್ನೆ 17**ಃ ಸೂಚಿಸಿದ ಅಂಕಲ್ ನಿಮ್ಮ ತಾಯಿಯನ್ನು ಕುರಿತು ಬೆಂಗಳೂರಿಗೆ ಬರಬೇಕೆಂದು ಬೆಂಗಳೂರಿಗೆ ಬಂದರೆ ನಿಮ್ಮ ತಾಯಿ ಕೇಳಿದ್ದನ್ನು ಕೊಡಿಸುವುದಾಗಿ ಫೋನ್‌ನಲ್ಲಿ ನುಡಿದರು?

**ಉತ್ತರ**ಃ ತಪ್ಪು.

**ಪ್ರಶ್ನೆ 18**ಃ ನಿಮ್ಮ ತಾಯಿ ಬೆಂಗಳೂರಿಗೆ ಹೋಗುವುದಾಗಿ ಒಪ್ಪಿರುತ್ತಾರೆ ಎಂದರೆ?

**ಉತ್ತರ**ಃ ನನ್ನ ತಾಯಿ ಬೆಂಗಳೂರಿಗೆ ಹೋಗಿದ್ದು ನಿಜ.

**ಪ್ರಶ್ನೆ 19**ಃ ನಿಮ್ಮ ತಾಯಿ ಬೆಂಗಳೂರಿಗೆ ಹೋಗುವ ಮುನ್ನ ತಾವು ಶ್ರೀಕಾಂತ್ ಅಂಕಲ್ ಜೊತೆಯಲ್ಲಿ ಹೋಗುವುದಾಗಿ ನುಡಿದು, ನಿಮಗೆ ತಿನಿಸುಗಳನ್ನು ನೀಡಿ ಹೋಗಿರುತ್ತಾರೆ ಎಂದರೆ?

**ಉತ್ತರ**ಃ ಹೋಗಿದ್ದು ನಿಜ ಆದರೆ ಶ್ರೀಕಾಂತ್ ಅಂಕಲ್ ಜೊತೆಯಲ್ಲಿ ಹೋಗುತ್ತಿರುವುದಾ ನುಡಿದಿಲ್ಲ.

**<u>ಪ್ರಶ್ನೆ 20ಃ</u>** ನಿಮ್ಮ ತಾಯಿ ನಿಮಗೆ ತಿಂಡಿ ತಿನಿಸುಗಳನ್ನು ನೀಡಿದ ನಂತರ ಸೂಚಿಸಿದ ಶ್ರೀಕಾಂತ್ ಅಂಕಲ್ ನಿಮ್ಮ ಮನೆಯ ಬಳಿ ಬಂದಿರುತ್ತಾರೆ ಎಂದರೆ?

<u>ಉತ್ತರಃ</u> ಬಂದಿರುವುದಿಲ್ಲ.

**<u>ಪ್ರಶ್ನೆ 21ಃ</u>** ಸೂಚಿಸಿದ ಶ್ರೀಕಾಂತ್ ಅಂಕಲ್ ನಿಮ್ಮ ಮನೆಯ ಬಳಿ ಬಂದು ನಿಮ್ಮ ತಾಯಿಯನ್ನು ಕುರಿತು "ಕಾರನ್ನು ರಸ್ತೆಯಲ್ಲಿ ನಿಲ್ಲಿಸಿದ್ದೇನೆ, ಬಾ ಎಂದು ಕರೆದು" ಹೋಗಿರುತ್ತಾರೆ ಎಂದರೆ?

<u>ಉತ್ತರಃ</u> ನನ್ನ ತಾಯಿ ಹೋಗಿದ್ದು ನಿಜ ಆದರೆ ಯಾರ ಜೊತೆಯಲ್ಲಿ ಹೋದರು ಗೊತ್ತಿಲ್ಲ.

**<u>ಪ್ರಶ್ನೆ 22ಃ</u>** ನ್ಯಾಯಾಲಯದಲ್ಲಿ ಸಾಕ್ಷಿ ಉತ್ತರವನ್ನು ಹೇಗೆ ನೀಡಬೇಕೆಂದು ಯಾರ ಯಾರ ಬಳಿ ಮಾತನಾಡಿದೆ?

<u>ಉತ್ತರಃ</u> ನನ್ನ ಅಜ್ಜಿಯ ಜೊತೆಯಲ್ಲಿ ಮಾತನಾಡಿದ್ದೇನೆ.

**<u>ಪ್ರಶ್ನೆ 23ಃ</u>** ನಾನು ಸಾಕ್ಷಿಯನ್ನು ನುಡಿಯುವ ಮುನ್ನ ನನ್ನ ಅಜ್ಜಿಯ ಜೊತೆಯಲ್ಲಿ ಯಾವ ರೀತಿ ಉತ್ತರಗಳನ್ನು ನೀಡಬೇಕೆಂದು ಚರ್ಚಿಸಿರುತ್ತೇನೆ ಎಂದರೆ?

<u>ಉತ್ತರಃ</u> ಇಲ್ಲ.

**<u>ಪ್ರಶ್ನೆ 24</u>ಃ** ನ್ಯಾಯಾಲಯದ ಮುಂದಿರುವ ಅಂಕಲ್ ಬಗ್ಗೆ ನಿಮಗೆ ಚೆನ್ನಾಗಿ ಅರಿವಿದೆ, ಅವರನ್ನು ಅನೇಕ ಬಾರಿ ಚಿಕ್ಕಮಗಳೂರಿನ ನಿಮ್ಮ ಮನೆಯಲ್ಲಿ ನೋಡಿರುವಿರಿ ಎಂದರೆ?

<u>ಉತ್ತರಃ</u> ತಪ್ಪು.

**<u>ಪ್ರಶ್ನೆ 25</u>ಃ** ನಿಮಗೆ ಸೂಚಿಸಿದ ಸಂಗತಿಯ ವಿಚಾರಗಳೆಲ್ಲವನ್ನು ಪೊಲೀಸರಿಗೆ ಈಗ ನಿಮಗೆ ಓದಿ ಹೇಳಿದಂತೆ ತಿಳಿಸಿರುವಿರಿ ಎಂದರೆ?

<u>ಉತ್ತರಃ</u> ಇಲ್ಲ. ಸಾಕ್ಷಿಗೆ ಓದಿ ಹೇಳಲಾದ ಹೇಳಿಕೆಯನ್ನು ಈಗ ನಿಶಾನೆ ಪಿ 11 ಎಂದು ಗುರುತು ಮಾಡಲಾಯಿತು.

**<u>ಪ್ರಶ್ನೆ 26</u>ಃ** ಆರೋಪಿ ಅಂಕಲ್ ತೊಂದರೆಯಾಗಬಾರದೆಂದು ನೀನು ಈಗಾಗಲೇ ನುಡಿದಂತೆ ಸಾಕ್ಷಿ ನುಡಿದಿದ್ದೇನೆ ಎಂದರೆ?

<u>ಉತ್ತರಃ</u> ಸರಿಯಲ್ಲ.

**<u>ಪಾಟೀ ಸವಾಲುಃ</u> ಶ್ರೀ.ಎಂ.ಪಿ. ವಕೀಲರಿಂದ – ಆರೋಪಿ ಪರವಾಗಿಃ- ಇರುವುದಿಲ್ಲ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಸಿದ್ದಲಿಂಗ ಪ್ರಭು)
3 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.